<u>ಪ್ರಧಾನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಧಾರವಾಡ</u>

<u>ಸಿಸಿ ನಂ**. 2029/2025**</u>

ಫಿರ್ಯಾದುದಾರರುಃ ಸಂಚಾರ ಪೋಲಿಸಠಾಣೆ , ಧಾರವಾಡ

**-**ವಿರುದ್ಧ**-**

ಆರೋಪಿತನ ಹೆಸರುಃ 1) ತಿಪ್ಪಣ್ಣಾ ಯಲ್ಲಪ್ಪ ನರೇಂದ್ರ , ವಯಾಃ 32 ವರ್ಷ
ಸಾಃ ಮಿಶ್ರಿಕೋಟಿ, ತಾಃ ಕಲಘಟಗಿ , ಜಿಃ ಧಾರವಾಡ

**<u>ಆ ಪಾ ದ ನೆ</u>**

ದಿನಾಂಕ 02-08-2025 ರಂದು ಮಧ್ಯಾಹ್ನ 1.00 ಗಂಟೆ ಸಮಾರಿಗೆ ಧಾರವಾಡದ ಕಲಘಟಗಿ ರಸ್ತೆಯಲ್ಲಿ ಆರ್ಯಭಟ ಕಾಲೇಜ ಹತ್ತಿರ 01 ನೇ ಆರೋಪಿತರಾದ ನೀವು ಚಲಾಯಿಸುತ್ತಿದ್ದ ಮಹೀಂದ್ರಾ ಬುಲೆರೋ ಕಂಪನಿಯ ಮಿನಿ ಗೂಡ್ಸ ವಾಹನ ನಂಃ ಕೆಎ-25/ಎಎ-2090 ನೇದ್ದನ್ನು ನುಗ್ಗಿಕೇರಿ ಕಡೆಯಿಂದ ಧಾರವಾಡದ ಕಡೆಗೆ ಸಾರ್ವಜನಿಕ ರಸ್ತೆಯಲ್ಲಿ ಅತೀ ಜೋರಾಗಿ ಹಾಗೂ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಬಜಾಜ ಕಂಪನಿಯ ಮೋಟಾರ ಸೈಕಲ ನಂಃ ಕೆಎ-25/ಇಝಡ್-3531 ನೇದ್ದಕ್ಕೆ ಅಪಘಾಪಡಿಸಿ ಆ ಮೂಲಕ **ಭಾರತೀಯ ನ್ಯಾಯ ಸಂಹಿತೆ ಕಲಂ 281** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 01 ನೇ ಆರೋಪಿತರಾದ ನೀವು ಮಿನಿ ಗೂಡ್ಸ ವಾಹನವನ್ನು ಚಲಾಯಿಸಿಕೊಂಡು ಬಂದು ಮೋಟಾರ ಸೈಕಲಗೆ ಅಪಘಾತಪಡಿಸಿದ್ದು ಅಲ್ಲದೇ ಅದರ ಸವಾರ ಭೀಮಪ್ಪ @ ಭೀಮಶಿ ತಂದೆ ಸಿದ್ದಪ್ಪ ಹುಲಮನಿ ಇವರಿಗೆ ಬಲವಾದ ಗಾಯಪಡಿಸಿ ಮರಣ ಹೊಂದುವಂತೆ ಮಾಡಿ ಆ ಮೂಲಕ ನೀವು **ನಾಗರಿಕ ಸುರಕ್ಷಾ ಸಂಹಿತೆ ಕಲಂ 106 (1)** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 01 ನೇ ಆರೋಪಿತರಾದ ನೀವು ಮಿನಿ ಗೂಡ್ಸ್ ವಾಹನವನ್ನು ಚಲಾಯಿಸಿಕೊಂಡು ಬಂದು ಮೋಟಾರ ಸೈಕಲಗೆ ಅಪಘಾತಪಡಿಸಿದ್ದು ಅಲ್ಲದೇ ಅದರ ಸವಾರ ಭೀಮಪ್ಪ @ ಭೀಮಶಿ ತಂದೆ ಸಿದ್ದಪ್ಪ ಹುಲಮನಿ ಇವರಿಗೆ ಅಪಘಾತಪಡಿಸಿ ಅಪಘಾತದ ಸಂಗತಿಯನ್ನು ಪೋಲಿಸ ಠಾಣೆಗೆ ತಿಳಿಸದೇ ಹಾಗೇ ಹೋಗಿ **ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ 134(ಬಿ) ಸಹಕಲಂ 187** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಪ್ರಶ್ನೆ **1)** ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?
ಉತ್ತರಃ

ಪ್ರಶ್ನೆ **2)** ಈಗ ನಿಮಗೆ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರಃ

ಧಾರವಾಡ
ದಿನಾಂಕಃ 17-01-2026

ಸಹಿ/-
ಪ್ರ. ಮು. ನ್ಯಾ. ದಂ, ಧಾರವಾಡ